**ಜ್ಯೋತಿಕಾರ್ಯದ ವಾರ್ತಾಪತ್ರ**



**ಮಹರ್ಷಿ ಅಮರ (1919-1982)**

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೇಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 6 ಸಂ. 11 ನವಂಬರ್ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಇತ್ತೀಚೆಗೆ ಕೆಲವು ಟಿವಿ ಚಾನಲ್‌ಗಳು "2012ರಲ್ಲಿ ಪ್ರಪಂಚ ಕೊನೆಗೊಳ್ಳುವುದರ" ಬಗ್ಗೆ ತೋರಿಸುತ್ತಿರುವುದು ಭಯಕ್ಕೆ ಎಡೆಮಾಡಿದೆ. ಜನ ಇದರ ಬಗ್ಗೆ ಚರ್ಚೆಗಾರಂಭಿಸಿದ್ದಾರೆ. ಅನೇಕರಿಗೆ ಸಂದೇಹವಿದೆ. ಅನೇಕರು ಇದೊಂದು ತಮಾಷೆ ಎಂದುಕೊಂಡಿದ್ದಾರೆ. ಅನೇಕರು ಭಯಗ್ರಸ್ತರಾಗಿದ್ದಾರೆ. ಮತ್ತು, ಕೆಲವರು 2012ನ್ನು ದಾಟಲು ತಯಾರಾಗುವ ವಿಧಾನಗಳನ್ನು ಅರಿತಿದ್ದಾರೆ.

ಮೊತ್ತಮೊದಲನೆಯದಾಗಿ, ಪ್ರಪಂಚ ಕೊನೆಗೊಳ್ಳುವುದಿಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ವಿಪತ್ತು-ಸಂಕಟಗಳಿರಬಹುದು. ಆದರೆ ಹೊಸಯುಗದ ರೀತಿಗಳನ್ನು ಆಯ್ಕೆಮಾಡಿಕೊಂಡು, ಅವುಗಳನ್ನು ಜೀವನದಲ್ಲಿ ಪಾಲಿಸಿದರೆ ನಾವು ನೋವನ್ನನುಭವಿಸುವುದಿಲ್ಲ. ಈ ಸರಳ ಆದರೆ ಪಾಲಿಸಲು ಕಷ್ಟಕರವಾದ ತತ್ವಗಳು ನಮಗೆ ಗೊತ್ತಿಲ್ಲದೇನಿಲ್ಲ. ನಾವು ಅವುಗಳ ಕಡೆ ಗಮನವೇ ಕೊಡದೆ, ಕತ್ತಲಿನ ಯುಗದಲ್ಲಿ ಕತ್ತಲಿನ ರೀತಿಗಳನ್ನು ಪಾಲಿಸಿ ಜೀವನ ನಡೆಸಿದೆವು. ಈಗ ಕತ್ತಲಯುಗ ಕೊನೆಯಾಗಿದೆ. ನಾವೀಗ ಹೊಸ ಬೆಳಕಿನ ಯುಗವನ್ನು ಪ್ರವೇಶಿಸುವ ಸಂಧಿಕಾಲದಲ್ಲಿದ್ದೇವೆ.

ಈ ಅಂಶಗಳನ್ನು ಸ್ಪಷ್ಟವಾಗಿ ವಿವರಿಸಿ ಜನರಿಗೆ ಹೇಳಬೇಕು. ಆದರೆ ಮೀಡಿಯಾ ಭಯ ಮತ್ತು ಭಾವನೆಗಳನ್ನು ಉದ್ರೇಕಿಸುವುದರತ್ತ ಕೇಂದ್ರೀಕರಿಸುತ್ತವೆ. ಜನರು ಬೆಳಕಿನ ಕಾರ್ಯಕರ್ತರ ಮತ್ತು ಬೆಳಕಿನ ಗುರುಗಳ ಹತ್ತಿರ ಹೋಗಬೇಕು. ಬೆಳಕಿನ ವಿಧಾನಗಳನ್ನು ಒಮ್ಮೆ ಅವರು ಆಯ್ಕೆಮಾಡುತ್ತಿದ್ದಂತೆ, ಬೆಳಕು ಅವರನ್ನು ಸರಿಯಾದ ಜನಗಳತ್ತ ಮಾರ್ಗದರ್ಶಿಸುತ್ತದೆ.

ನಾವು ಭಯಪಡಬಾರದು ಏಕೆಂದರೆ ಭಯ ನಮ್ಮನ್ನು ದುರ್ಬಲರನ್ನಾಗಿಸುತ್ತದೆ. ಭಯ ನಮ್ಮಲ್ಲಿ ಗೊಂದಲವೆಬ್ಬಿಸುತ್ತದೆ ಮತ್ತು ನಮ್ಮನ್ನು ಹತಾಶರನ್ನಾಗಿಸುತ್ತದೆ. ಗೊಂದಲ ಮತ್ತು ಹತಾಶೆಗಳ ಸ್ಥಿತಿಯಲ್ಲಿ, ನಾವು ಜ್ಯೋತಿಷಿಗಳು ಮತ್ತು ಪೂಜಾರಿಗಳ ಹತ್ತಿರ ಕಾತುರದಿಂದ ಹೋಗುತ್ತೇವೆ. ಆದರೆ ಅವರು ನಮಗೆ ಮಾರ್ಗದರ್ಶಿಸಲಾರರು. ಹಳೆಯ ಕ್ರಮದ ಸ್ವಾಮೀಜಿಗಳು ಮತ್ತು ಗುರುಗಳು ಮಾರ್ಗದರ್ಶಿಸಲಾರರು. ಬೆಳಕಿನ ಚಾನಲ್‌ಗಳು ಅಥವಾ ಚಾನಲ್‌ಗಳ ಸಂಪರ್ಕದಲ್ಲಿರುವವರು ಮಾತ್ರ ಮಾರ್ಗದರ್ಶಿಸಬಲ್ಲರು. ಇಂಥವರು ವಿರಳ ಆದರೆ ಅವರು ಲಭ್ಯವಿದ್ದಾರೆ.

ನಾವು ಸರಿಯಾದ ಮಾರ್ಗದಲ್ಲಿ ಧ್ಯಾನ-ಅಭ್ಯಾಸವನ್ನು ತೆಗೆದುಕೊಂಡರೆ, ಧ್ಯಾನವೇ ನಮ್ಮನ್ನು ಸರಿಯಾದ ಜನಗಳ ಹತ್ತಿರ ಕರೆದುಕೊಂಡು ಹೋಗುತ್ತದೆ. ನಾನು 'ಸರಿಯಾದ ಮಾರ್ಗ' ಎಂದು ಏಕೆ ಹೇಳಿದೆನೆಂದರೆ ಹಲವಾರು ಸರಿಯಲ್ಲದ-ಮಾರ್ಗಗಳಿವೆ. ಪುನಃ, ನಮ್ಮ ಶುದ್ಧ ಸಂಕಲ್ಪ, ನಮ್ಮನ್ನು ಸರಿಯಾದ ಮಾರ್ಗ, ಜನ ಮತ್ತು ಮಾರ್ಗದರ್ಶನಕ್ಕೆ ಕರೆದೊಯ್ಯುತ್ತದೆ.

ಈಗ ನಮ್ಮ ಕೆಲಸದ ಗುರಿ, 2012ನ್ನು ಸಾಗಿಹೋಗಲು ಸಿದ್ಧತೆ. ಇದು ಸ್ವಾಭಾವಿಕ. 1974ರಿಂದಲೇ ಋಷಿಗಳು ಧ್ಯಾನವನ್ನು ಕಲಿಸಿಕೊಟ್ಟು, ಹೊಸಯುಗದ ಬಗ್ಗೆ ಹೊಸ ಜ್ಞಾನವನ್ನು ನಮಗೆ ಕೊಟ್ಟರು. ಆಗ ಹೊಸಯುಗಕ್ಕೆ ಸಂಧಿಕಾಲ 432 ವರ್ಷಗಳಿತ್ತು. 2009ರಲ್ಲಿ, ಈ ಸಂಧಿಕಾಲವನ್ನು 21 ಡಿಸೆಂಬರ್ 2009ರಿಂದ ಮೂರು ವರ್ಷಗಳಿಗೆ ಇಳಿಸಲಾಯಿತು. ಈ ಒತ್ತರಿಸಿದ ಮೂರು ವರ್ಷಗಳಲ್ಲಿ, ಆಗಬೇಕಾಗಿರುವ ಬದಲಾವಣೆಗಳು ಬಹಳ ಮತ್ತು ಕಷ್ಟಕರ. ಆದರೆ ಧ್ಯಾನ ಮತ್ತು ಋಷಿಗಳ ಹಾಗೂ ಬೆಳಕಿನ ಕಾರ್ಯಕರ್ತರ ಸಹಾಯದಿಂದ, ನಾವು ಸುಲಭವಾಗಿ 2012ನ್ನು ಸಾಗಿಹೋಗಬಹುದು.

ಇದು ನಾವು ಪ್ರತಿಯೊಬ್ಬರಿಗೂ ಕಳುಹಿಸಬೇಕಾಗಿರುವ ಸಂದೇಶ. ಇದು ತಕ್ಷಣ ಎಲ್ಲರ ಮನಸ್ಸಿನಾಳಕ್ಕೆ ಇಳಿಯದಿರಬಹುದು. ಆದರೆ ಬೆಳಕು ಇದನ್ನು ಬೇಗನೆ ಮನದಟ್ಟು ಮಾಡುತ್ತದೆ.

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಆನೇಕಲ್‌ನಲ್ಲಿ ಸಭಾಂಗಣವನ್ನು ಉದ್ಘಾಟಿಸಲು ಗುರೂಜಿಯವರು ದೀಪ ಬೆಳಗಿಸುತ್ತಿರುವುದು.

### ಸುದ್ದಿ-ಸೂಚನೆ

- 18-10-2009 ರಂದು 40ಕ್ಕಿಂತಲೂ ಹೆಚ್ಚು ಜನ ಪಟಾಕಿ ಮತ್ತು ಸಿಡಿಮದ್ದುಗಳನ್ನು ಸಿಡಿಸುವುದರ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲು ತಪೋನಗರದಲ್ಲಿ ಸೇರಿದ್ದರು.
- 6-11-2009 ರಿಂದ 15-11-2009 ವರೆಗೆ ಪ್ಯಾಲೇಸ್ ಮೈದಾನದಲ್ಲಿ ನಡೆಯಲಿರುವ "ಬೆಂಗಳೂರು ಪುಸ್ತಕೋತ್ಸವ-2009"ದಲ್ಲಿ ಅನುಕ್ರಮವಾಗಿ ಮೂರನೇ ವರ್ಷ ಭಾಗವಹಿಸು ತ್ತಿದ್ದೇವೆ. ಮೆಂಬರ್‌ಗಳು ನಮ್ಮ ಸ್ಟಾಲಿಗೆ ಭೇಟಿ ನೀಡಿ, ಪ್ರೋತ್ಸಾಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
- ಗುರೂಜಿಯವರು ಬರೆದಿರುವ 'Beyond 2012' ಪುಸ್ತಕವು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಈಗ ಲಭ್ಯವಿದೆ.
- ಉತ್ಸಾಹೀ, ಪರಿಣತ ವಾಲಂಟಿಯರ್‌ಗಳ ಒಂದು ವಿಶೇಷ ತಂಡದಿಂದ ನಮ್ಮ ವೆಬ್-ಸೈಟ್‌ಗಳು ಪುನರ್-ವಿನ್ಯಾಸಗೊಳ್ಳುತ್ತಿವೆ.
- ಚಕ್ರ ಚಾಲನೆ ಹಂತದಲ್ಲಿ ಧ್ಯಾನವನ್ನು ಮುಗಿಸಿರುವ ಸಾಧಕರು ಶಂಬಲ ಗ್ರೂಪ್-ಅನ್ನು ಸೇರಬಹುದು. 10-01-2010ರಿಂದ ಹೊಸ ಬ್ಯಾಚ್ ಆರಂಭ ವಾಗುತ್ತದೆ.
- 21-11-2009 ರಂದು ಗುರೂಜಿಯವರೊಂದಿಗೆ ವಿಶೇಷ ರಿಟ್ರೀಟ್-ಅನ್ನು ಆಯೋಜಿಸಲಾಗಿದೆ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ನವಂಬರ್ 8: | ಶಂಬಲ ಗ್ರೂಪ್ ಮೀಟಿಂಗ್ ಮಧ್ಯಾಹ್ನ 2 ಗಂಟೆಗೆ |
| ನವಂಬರ್ 15: | ಮಧ್ಯಾಹ್ನ 2 ಗಂಟೆಗೆ ರಾ-ಗ್ರೂಪ್ ಮೀಟಿಂಗ್. ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ ಗ್ರೂಪ್ ಮೀಟಿಂಗ್. |
| ನವಂಬರ್ 21: | ಗುರೂಜಿಯವರೊಂದಿಗೆ ವಿಶೇಷ ರಿಟ್ರೀಟ್ |
| ನವಂಬರ್ 29: | ಅಖಂಡ ಧ್ಯಾನ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 13-09-09 | ಅನಿಲ್ ಜೋಶಿ |
| 20-09-09 | ಕಶ್ಯಪ್, ಅಂಜಲಿ ಪಾಟೀಲ್, ರತ್ನ ರಾವ್ ಮತ್ತು ಭೂದೇವಿ |
| 27-09-09 | ರಮೇಶ್, ರಾಮ್‌ನಾರಾಯಣನ್ ಮತ್ತು ಪ್ರಿಯಾಂಕ ಮಿಶ್ರ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಸೋಮ | ಪೂರ್ಣಿಮಾ |
| 10 | ಮಂಗಳ | ಕೃಷ್ಣಾಷ್ಟಮಿ |
| 15 | ಭಾನು | ಮಾಸ ಶಿವರಾತ್ರಿ |
| 16 | ಸೋಮ | ಅಮಾವಾಸ್ಯೆ |
| 27 | ಶುಕ್ರ | ಶುಕ್ಲದಶಮಿ |

ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು ಶ್ರೀ ಅವಿನಾಶ್ ಎನ್. ರಾವ್, ಕು॥ ಪ್ರಗತಿ ರಾಜ್ ಮತ್ತು ಶ್ರೀಮತಿ ನಿರ್ಮಲ ಬಾಲಕೃಷ್ಣನ್

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

ದೂರಕಲಿಕೆ ಸಾಧಕ, ಶ್ರೀ. ರವಿಶಂಕರ್ ಸಂಗೋಡನ್‌ರವರು ಶನಿವಾರಗಳಂದು

ಮಧ್ಯಾಹ್ನ 3ಘಂಟೆಗೆ

ಮರಿಯಾ ಫಯೋರ ಡಾನ್ಸ್ ಸ್ಟುಡಿಯೊ, 201 ಸಮ್ಮರ್ ಸ್ಟ್ರೀಟ್, ಸ್ಟಾಮ್‌ಫೋರ್ಡ್, CT 06901

ಮತ್ತು ಬುಧವಾರಗಳಂದು ಸಂಜೆ 7ಘಂಟೆಗೆ ಪ್ರಯಾರಿಟಿ ಫ್ಲಿಟ್‌ನೆಸ್ ಸೆಂಟರ್, 167 ಸೌತ್ ಏವ್, ನ್ಯೂ ಕಾನನ್, CT 06840 ಸ್ಥಳಗಳಲ್ಲಿ ಲೈಟ್ ಚಾನಲಿಂಗ್ ಸೆಶನ್‌ಗಳನ್ನು ನಡೆಸುತ್ತಾರೆ.

## ಸತ್ಯನಿಷ್ಠೆ

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನಮ್ಮ ಜೀವನವನ್ನು ಮೌಲ್ಯಗಳ ಆಧಾರದ ಮೇಲೆ ರೂಪಿಸಿಕೊಳ್ಳಬೇಕು. ಮೌಲ್ಯಗಳಲ್ಲಿ ಸತ್ಯನಿಷ್ಠೆ ಬಹಳ ಮುಖ್ಯವಾದುದು. ಸತ್ಯನಿಷ್ಠೆ ಎಂದರೆ ಇರುವ ವಿಷಯವನ್ನು ಅಥವಾ ವಾಸ್ತವಿಕ ಸ್ಥಿತಿಯನ್ನು ಇದ್ದಹಾಗೆಯೇ ಒಪ್ಪಿಕೊಳ್ಳುವುದು. ಸತ್ಯ ಯಾವಾಗಲೂ ಸರಿಯಿರುತ್ತದೆ ಆದರೆ ವಾಸ್ತವಿಕತೆ(fact) ಸರಿಯಿರಬಹುದು ಅಥವಾ ಇಲ್ಲದಿರಬಹುದು.

ನಾವು ಸತ್ಯ ಮತ್ತು ವಾಸ್ತವಿಕತೆ, ಇವೆರಡರಕ್ಕೆ ಇರುವ ಭೇದವನ್ನು ತಿಳಿದುಕೊಳ್ಳಬೇಕು. ನಿಜಾಂಶವನ್ನು ಹೇಳುವುದರಿಂದ ಇನ್ನೊಬ್ಬರಿಗೆ ನೋವಾಗುತ್ತದೆ, ಅಸಂತೋಷವಾಗುತ್ತದೆ ಎಂದು ಹೇಳದೆ ಇರಬಹುದು. ಅಥವಾ ಅಗತ್ಯವೆನಿಸಿದಲ್ಲಿ, ವಿವೇಚಿಸಿ ಅವರಿಗೆ ನೋವಾಗದ ರೀತಿಯಲ್ಲಿ ಮನವರಿಕೆ ಮಾಡಬಹುದು. ಆಡಂಬರ, ಅಸತ್ಯ, ಅನವಶ್ಯಕ ಹಸ್ತಕ್ಷೇಪಗಳಿಂದ ನಮಗೆ ಅಪಾಯವೇ ಹೆಚ್ಚು.

ಸತ್ಯದ ತತ್ವಗಳನ್ನು ಆಚರಣೆಗೆ ತರಲು, ನಮ್ಮ ಅಸ್ತಿತ್ವದಲ್ಲಿರುವ ವಿವೇಕವನ್ನು ಬಳಸಲು ಮೊದಲು ಕಲಿಯಬೇಕು. ಆಗ ನಾವು ಎಲ್ಲರೊಡನೆ ಪ್ರೀತಿ ❑

## ಮಾಸ್ಟರ್ ವಿ–ಯವರಿಂದ ಸಾಧಕರಿಗೆ ವಿಶೇಷ ಸೂಚನೆಗಳು

1. ಸದಾ ಶಾಂತತೆಯಿಂದ ಇರಿ. ಯಾವಾಗ ಲಾದರೂ ಕೋಪ ಬಂದರೆ, ಸಪ್ತಋಷಿ ಪ್ರಾಣಾಯಾಮವನ್ನು (3ಬಾರಿ) ಮಾಡಿ ಮತ್ತು ಜೊತೆಗೆ ಮೊದಲನೇ ಶಂಬಲ ಸೂತ್ರವನ್ನು ಅಭ್ಯಾಸ ಮಾಡಿ.
2. ನಕಾರಾತ್ಮಕತೆಯನ್ನು ಹೊಂದಿರುವ ಜನರಿಂದ ದೂರವಿರಿ. ದೂರವಿರಲು ಸಾಧ್ಯವಾಗದಿದ್ದಲ್ಲಿ, ನಿಮ್ಮನ್ನು ಸಂಪೂರ್ಣವಾಗಿ ನೀಲಿ ಬೆಳಕಿನಿಂದ ತುಂಬಿಕೊಳ್ಳಿ.
3. ಕಷ್ಟಕರ ಸಂದರ್ಭಗಳಲ್ಲಿ ಮಾಸ್ಟರ್ 'ವಿ' ಯವರೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಿ.
4. ಯಾವುದೇ ಪ್ರಾಮಾಣಿಕ ಕಾರಣಗಳಿಂದ ಧ್ಯಾನ ಮಾಡಲು ಸಾಧ್ಯವಾಗದಿದ್ದ ದಿನ,
   - ರಕ್ಷಾಕವಚವನ್ನು ಬಲಪಡಿಸಿಕೊಳ್ಳಿ.
   - ಮೊದಲನೇ ಶಂಬಲ ಸೂತ್ರವನ್ನು ಎಷ್ಟು ಸಾಧ್ಯವೋ ಅಷ್ಟು ಅಭ್ಯಾಸ ಮಾಡಿ.
   - ಇವೆರಡೂ ಮಾಡಲಾಗದಿದ್ದಲ್ಲಿ, ಮಾಸ್ಟರ್ 'ವಿ' ಯವರೊಂದಿಗೆ ಸಂಪರ್ಕ ಕಲ್ಪಿಸಿ ಕೊಂಡು ಪ್ರಾರ್ಥಿಸಿ.
5. ಧಾರ್ಮಿಕವಿಧಿ ಆಚರಣೆಗಳಿಂದ ದೂರವಿರಿ. ಅವುಗಳನ್ನು ಕಪ್ಪು ಶಕ್ತಿಗಳು ನಿಯಂತ್ರಿಸುತ್ತಿವೆ.
6. ಕೆಲವು ಸಂದರ್ಭಗಳಲ್ಲಿ ಧ್ಯಾನ ಮಾಡುವುದು ಕಷ್ಟವಾದಲ್ಲಿ, ಚಿಂತಿಸಬೇಡಿ. ಬೆಳಕನ್ನು ಹೆಚ್ಚು ಹೆಚ್ಚು ಅನುಭವಿಸಿ.
7. 16–10–2009ರಿಂದ ಗಡಿಯಾರ ಚಾಲನೆ ಗೊಂಡಿದೆ. ನಾವು ಬೆಳಕು ಹಾಗೂ ನಕಾರಾತ್ಮಕತೆಗಳ ಮಧ್ಯೆ ಸ್ಪಷ್ಟವಾದ ಆಯ್ಕೆ ಮಾಡಬೇಕು. ಮತ್ತು ನಾವು ಮಾಡಿರುವ ಆಯ್ಕೆಗೆ ನಿಷ್ಠರಾಗಿರಬೇಕು. ❑

## ತಪೋನಗರ ಡೈರಿ

**ಸಂ: ಶ್ಯಾಮಲಾದೇವಿ; ಅನು: ಪಾಂಡುರಂಗ**

ಉನ್ನತ ಸಾಧನೆಯ ಗುರಿಗಾಗಿ ಶಂಬಲಗ್ರೂಪ್ ಸಾಧಕರು, ಸೆಪ್ಟೆಂಬರ್ 13ರಂದು ಗುರೂಜಿಯವರ ಮಾರ್ಗದರ್ಶನಕ್ಕಾಗಿ ಮತ್ತು ಶಂಬಲದಿಂದ ಬರುವ ಮಹರ್ಷಿ ತರುವ ವಿಶೇಷ ಚೈತನ್ಯಗಳನ್ನು ಪಡೆಯಲು, ಸೇರಿದ್ದರು. ಈ ತಂಡ ದಿನೇ ದಿನೇ ಬೆಳೆಯುತ್ತಾ, ಸತತವಾಗಿ ಸುಧಾರಿಸಿ, ಸಾಧಕರು ತಮ್ಮ ಸಾಧನೆಯ ಬಗ್ಗೆ ಬಹಳ ಕಾಳಜಿ ಹೊಂದಿದ್ದಾರೆ. ಈ ವರ್ಷ ದೂರಕಲಿಕೆ ಸಾಧಕರಿಗೆ ಈ ವಿಶೇಷ ಅವಕಾಶ ಸಿಕ್ಕಿದೆ. ಇದು ಅವರಿಗೆ ಋಷಿಗಳಿಂದ ಬಂದಿರುವ ಅಪೂರ್ವ ಕೊಡುಗೆ.

ನಾಡಗೌಡ ಗೊಲ್ಲಹಳ್ಳಿಯಲ್ಲಿ ಹೊಸದಾಗಿ ನವೀಕರಣಗೊಂಡಿರುವ ಎಲ್ಲಮ್ಮದೇವಿ ದೇವಸ್ಥಾನ ವನ್ನು ಗುರೂಜಿಯವರು ಸೆಪ್ಟೆಂಬರ್ 19ರಂದು ಉದ್ಘಾಟಿಸಿದರು. ಸುಮಾರು 100 ಧ್ಯಾನಿಗಳು ಭಾಗವಹಿಸಿದ್ದರು.

ಗುರೂಜಿಯವರೊಂದಿಗೆ ತಿಂಗಳ ಕೂಟಕ್ಕಾಗಿ ಜನರು ಕಾಯುತ್ತಿರುತ್ತಾರೆ. ಎರಡು ಘಂಟೆಗಳ ಈ ಸೆಶನ್ ಒಂದು ಅಪರೂಪದ ಅವಕಾಶ. ಗುರೂಜಿಯವರೊಂದಿಗೆ ಮನಸಾರೆ ಸಂಭಾಷಿಸ ಬಹುದಾದ ಈ ಅವಕಾಶವನ್ನು ಯಾರೂ ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಸೆಪ್ಟೆಂಬರ್ ತಿಂಗಳಕೂಟ 26ರಂದು ನಡೆಯಿತು.

ಗುರೂಜಿಯವರು ಓದಿದ ಸ್ಕೂಲ್ ಉತ್ತಮ ಸೌಲಭ್ಯಗಳನ್ನು ಹೊಂದಿರಬೇಕೆಂಬುದು, ಅವರ ಕನಸುಗಳಲ್ಲಿ ಒಂದು. ಅವರ ಮಿತ್ರರಾದ ಶ್ರೀ ಕೃಷ್ಣಮೂರ್ತಿಯವರೂ ಸಹ ಇದೇ ಕನಸು ಹೊಂದಿದ್ದು, ಗುರೂಜಿಯವರೊಂದಿಗೆ ಕೈ ಜೋಡಿಸಿದರು. ಇವರಿಬ್ಬರೂ ಸೇರಿ, ಆನೇಕಲ್ಲಿನಲ್ಲಿ ತಮ್ಮ ಹಳೇ ಸ್ಕೂಲಿಗಾಗಿ ಸಭಾಂಗಣವನ್ನು ಕಟ್ಟಿಸಿದ್ದಾರೆ. ಈ ಸಭಾಂಗಣವನ್ನು ಅದ್ದೂರಿ ಯಿಂದ ಸೆಪ್ಟೆಂಬರ್ 21ರಂದು ಉದ್ಘಾಟಿಸ ಲಾಯಿತು.

ಗುರೂಜಿಯವರ ಹುಟ್ಟೂರು ಆನೇಕಲ್ಲಿನಲ್ಲಿ ದಸರಾ ಹಬ್ಬದ ಆಚರಣೆಗಾಗಿ ಗುರೂಜಿ ಯವರನ್ನು ಸೆಪ್ಟೆಂಬರ್ 28ರಂದು ಆಹ್ವಾನಿಸ ಲಾಗಿತ್ತು. ಆನೇಕಲ್ ಮತ್ತು ಸುತ್ತಮುತ್ತ ಹಳ್ಳಿಗಳ ಜನರೆಲ್ಲಾ ಒಂದೇ ಸ್ಥಳದಲ್ಲಿ ಸೇರಿ ವೈಭವಪೂರ್ಣ ದಸರಾ ಹಬ್ಬವನ್ನು ವೀಕ್ಷಿಸಿದರು.

ಗುರೂಜಿಯವರಿಗೆ ಅತ್ಯಂತ ಪ್ರೀತಿಪಾತ್ರರಾದ ಅಭಿನಂದನ್‌ರವರ ಮದುವೆ ಅಕ್ಟೋಬರ್ 2ರಂದು ತಪೋನಗರದಲ್ಲಿ ನಡೆಯಿತು. ಕೆಲವೇ ನಿಮಿಷಗಳ ಈ ಮದುವೆ ಗುರೂಜಿಯವರ ನಿರ್ದೇಶನದಂತೆ ನಡೆಯಿತು. ಧಾರ್ಮಿಕ ವಿಧಿಗಳಿಲ್ಲದ, ಮಂತ್ರಗಳಿಲ್ಲದ, ಮದುವೆ ಅದಾಗಿತ್ತು. ಋಷಿಗಳೇ ಆಶೀರ್ವದಿಸಿದ ಈ ಹೊಸರೀತಿಯ, ಹೊಸಯುಗದ ಮದುವೆಯಲ್ಲಿ ಹಾಜರಿದ್ದ ನೂರಾರು ಬಂಧು–ಮಿತ್ರರು ಹರ್ಷೋದ್ಗಾರ ವ್ಯಕ್ತಪಡಿಸಿ, ವಧೂವರರನ್ನು ಅಭಿನಂದಿಸಿದರು. ❑

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ವಿಶ್ವನಾಥ್ ಎಂ. ಎನ್)

**06.09.2009**

ನಾವು ಬದಲಾವಣೆಯಾಗಲು ವಿಶ್ವವು ಮಿಲಿಯನ್‌ಗಟ್ಟಲೆ ವರ್ಷಗಳಿಂದ ಕಾಯುತ್ತಿದೆ ಮತ್ತು ಅದು ತನ್ನ ತಾಳ್ಮೆಯನ್ನು ಕಳೆದುಕೊಳ್ಳುತ್ತಿದೆ.

ಇಚ್ಛಾಸ್ವಾತಂತ್ರ್ಯವಿರುವುದರಿಂದ ನಾವು ಯಾವಾಗಲೂ ಬೇರೆ ವಿಷಯಗಳನ್ನು ಆರಿಸಿಕೊಳ್ಳುತ್ತೇವೆ. ಇದು ಯಾವಾಗಲೂ ಸಾಧ್ಯವಿಲ್ಲ. ಜೀವನದಲ್ಲಿ ಬೇರೆ ವಿಧಾನ ಗಳಿರಬಹುದು. ನಾವು ಒಳ್ಳೆಯ ವಿಷಯಗಳನ್ನು ಕಳೆದುಕೊಳ್ಳುತ್ತ ಬೇರೆ ವಿಷಯಗಳನ್ನೇ ಆರಿಸಿಕೊಂಡು ಬದುಕಲು ಆಗದು. ಕೆಲವು ಸಲ ಒಳ್ಳೆಯ ವಿಷಯಗಳನ್ನು ಹೇರಬೇಕಾಗುತ್ತದೆ. ಇಲ್ಲಿಯವರೆಗೆ ಇದನ್ನು ಮಾಡಿಲ್ಲ. ಇನ್ನು ಮುಂದೆ ಪ್ರಯತ್ನಿಸಬೇಕಾಗುತ್ತದೆ.

ನಕಾರಾತ್ಮಕ ಶಕ್ತಿಗಳು ಬಹಳ ಚುರುಕಾಗಿವೆ. ಅವು ತಮ್ಮ ಕೊನೆಯ ಹೋರಾಟ ನಡೆಸುತ್ತಿವೆ ಅಲ್ಲದೆ ನಮ್ಮನ್ನು ವಿಚಲಿತಗೊಳಿಸಿ, ಪ್ರಭಾವ ಬೀರುತ್ತಿವೆ. ನಾವು ಅತ್ಯಂತ ಜಾಗರೂಕ ರಾಗಿರಬೇಕು. ಆದ್ದರಿಂದ ಈ ಮಂತ್ರವನ್ನು ಪಾಲಿಸಿ: "ಗುರುತಿಸಿ ಮತ್ತು ದೂರವಿರಿ. ನಕಾರಾತ್ಮಕ ಆಲೋಚನೆ ಮತ್ತು ನಕಾರಾತ್ಮಕ ಜನರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ".

ಕೆಲವು ಸಲ ಒಳ್ಳೆಯ ಜನರು ಕೂಡಾ ಬಹಳ ನಕಾರಾತ್ಮಕ ಚೈತನ್ಯಗಳ ಚಾನಲ್‌ಗಳಾಗುತ್ತಾರೆ. ಕೋಪ ಬಂದಾಗ ಮನುಷ್ಯನು ನಕಾರಾತ್ಮಕ ಚೈತನ್ಯಗಳ ಪರಿಪೂರ್ಣ ಚಾನಲ್ ಆಗುತ್ತಾನೆ. ಒಂದು ಸಣ್ಣ ರಂಧ್ರ ಸಾಕು, ಅದರ ಮೂಲಕ ತನ್ನೆಲ್ಲ ಚೈತನ್ಯಗಳನ್ನು ಕಳುಹಿಸುತ್ತದೆ. ಇದ್ದಕ್ಕಿದ್ದಂತೆ ಯಾವತ್ತೋ ಒಂದು ದಿನ ನಮಗೆ ಏನಾಗುತ್ತಿದೆ ಎಂಬುದನ್ನು ಅರಿಯುತ್ತೇವೆ. ಅನೇಕ ವರ್ಷ ಗಳಿಂದ ಬೆಳೆಸಿಕೊಂಡು ಬಂದಿದ್ದೆಲ್ಲಾ ಕರಗಿ ನಾಶವಾಗುತ್ತಿರುವುದನ್ನು ನಿಸ್ಸಹಾಯಕರಾಗಿ ನೋಡುತ್ತೇವೆ. ಆದ್ದರಿಂದ ಇವುಗಳ ಬಗ್ಗೆ ಎಚ್ಚರವಾಗಿರಬೇಕು.

ಎಲ್ಲದಕ್ಕೂ ಸೂಕ್ತ, ಸರಳ ಪರಿಹಾರವೆಂದರೆ ನಿಮ್ಮಲ್ಲಿ ಬೆಳಕನ್ನು ಹೊಂದಿರುವುದು. ಬೆಳಕು ನಿಮ್ಮನ್ನು ಯಾವಾಗಲೂ ರಕ್ಷಿಸುವುದಲ್ಲದೆ ದೈವಿಕತೆಯೊಂದಿಗೆ ಸಂಪರ್ಕದಲ್ಲಿರಿಸುತ್ತದೆ.

ಬೇರೆಯವರ ವ್ಯವಹಾರಗಳಲ್ಲಿ ತಲೆ ಹಾಕುವುದು ಅನುಚಿತ, ಏಕೆಂದರೆ ಅವರ ಕರ್ಮಗಳ ಸ್ವಲ್ಪ ಭಾಗವನ್ನು ನಾವು ಪಡೆಯುತ್ತೇವೆ. ಅಲ್ಲದೆ ಅವರ ಕಲಿಕೆಯ ದಾರಿಗೆ ಅಡ್ಡಬರುತ್ತೇವೆ. ಇದು ಹೀಲರ್‌ಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಜಾಗರೂಕರಾಗಿರುವುದು ಅತ್ಯವಶ್ಯಕ.

ನಿಮ್ಮ ಸಾಧನೆಯ ಬಗ್ಗೆ ಇತರರೊಂದಿಗೆ ಚರ್ಚಿಸಬೇಡಿ ಮತ್ತು ತಂತ್ರಗಳನ್ನು ತಿಳಿಸಬೇಡಿ. ನಿಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ, ನಿಮ್ಮ ಗುರಿ, ಸಂಕಲ್ಪ, ಸಾಧನೆಗಳ ಬಗ್ಗೆ ಅತಿಯಾದ ಪ್ರಶಂಸೆ ಮಾಡಬೇಡಿ. ಶಂಬಲದ ಎಲ್ಲ ತತ್ವಗಳನ್ನು ಅಭ್ಯಾಸಮಾಡಿ. ಧ್ಯಾನ ಮಾಡಿ, ಗುಣಾತ್ಮಕರಾಗಿ ಮತ್ತು ಆತ್ಮಾವಲೋಕನ ಮಾಡಿಕೊಳ್ಳಿ.

ಅಮರರು ಆಧ್ಯಾತ್ಮಿಕ ಮತ್ತು ಲೌಕಿಕ ಭಾಗಗಳನ್ನು ಅಲಕ್ಷ್ಯಮಾಡದೆ ಎರಡನ್ನೂ ಸರಿತೂಗಿಸಿಕೊಳ್ಳುವ ವಿಷಯದಲ್ಲಿ ಹೆಚ್ಚು ಒತ್ತನ್ನು ನೀಡಿದ್ದಾರೆ. ಅವರು, "ನಿಮ್ಮ ಗುರುಗಳನ್ನು ಕಣ್ಣುಮುಚ್ಚಿಕೊಂಡು ಅನುಸರಿಸಿ. ವಿಶ್ವಾಸ ಮತ್ತು ಅವಿಶ್ವಾಸ ಎರಡು ಗಾಲಿಗಳಿದ್ದಂತೆ. ಈ ಎರಡೂ ಗಾಲಿಗಳ ಮೇಲೆ ನೀವು ಸವಾರಿ ಮಾಡಬೇಕು. ಪ್ರಯಾಣ ನಿಮ್ಮ ಸ್ವಂತದ್ದಾಗಿರಬೇಕು. ಆಗ ನೀವು ಹೊಸ ವಿಶ್ವಗಳನ್ನು ನೋಡುವಿರಿ" ಎಂದು ಹೇಳಿದ್ದಾರೆ. ಅವರು ಹೊಸ ರೀತಿಯ ಉಪಾಸನೆಗಳಿವೆ ಎಂದು ಹೇಳಿದ್ದಾರೆ. ಆದರೆ ನಾವು ಹಳೆಯ ವಿಧಾನಗಳನ್ನು ಕೀಳಾಗಿ ನೋಡಬಾರದು. ವೈಯುಕ್ತಿಕ ನೆಲೆಯಲ್ಲಿ ಈಗಿರುವ ವ್ಯವಸ್ಥೆಗಳನ್ನು ವಿರೋಧಿಸಿ ವ್ಯರ್ಥವಾಗಿ ಕಾಲ ಕಳೆಯಬಾರದು. ಅವರು ಆಂದೋಲನದಲ್ಲಿ ನಂಬಿಕೆ ಇಟ್ಟಿದ್ದರು ಆದರೆ ಕ್ರಾಂತಿಯಲ್ಲಿ ಅಲ್ಲ. ಅವರು, ನಾವು ಧ್ಯಾನ ಮಾಡಬೇಕು, ಅನುಭವಿಸಬೇಕು ಮತ್ತು ಹೆಚ್ಚಿನ ಸಮಯವನ್ನು ಒಳಗಿನ ಪ್ರಪಂಚಗಳಲ್ಲಿ ಕಳೆಯಬೇಕೆಂದಿದ್ದಾರೆ. ಅಲ್ಲದೆ ಪ್ರಕೃತಿಯನ್ನು ನೋಡಿ ಸಂತೋಷಿಸಬೇಕು, ದೇವರನ್ನು ಅನುಭವಿಸಬೇಕು. ಯಾರಾದರೂ ಎಲ್ಲ ರೀತಿಯ ಸುಖಗಳನ್ನು ಅನುಭವಿಸಬಹುದು ಆದರೂ ಅವುಗಳಿಂದ ದೂರವಿರಬಹುದು. ಆದರೆ ಕೇವಲ ಸುಖಗಳನ್ನು ವರ್ಜಿಸಿ, ಬಡತನವನ್ನು ಆರಿಸಿಕೊಳ್ಳುವುದರಿಂದ ಯಾವ ವ್ಯಕ್ತಿಯೂ ಆಧ್ಯಾತ್ಮಿಕ ಎನಿಸಲಾರ.

ಆಗಸ್ಟ್ 25 ರಿಂದ 27ರ ವರೆಗೆ ಚಾನಲ್ ಮಾಡುವಾಗ ಸೊಲೂಂತ್ರ ಅವರು ಕೂಡಾ ಭಾಗವಹಿಸಿದ್ದರು. ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಜನರು ಒಂದು ನೂತನ, ಅಪರೂಪ ಮತ್ತು ವಿಶೇಷ ಚೈತನ್ಯ ಇಳಿದು ಬರುತ್ತಿರುವುದನ್ನು ಗಮನಿಸಿದರೆಂದು ಅವರು ನಮಗೆ ತಿಳಿಸಿದರು. ಅಂದರೆ ಇದು ಅನೇಕ ಜನರು ಬೆಳಕನ್ನು ಕೆಳ ತರಲು ಕೆಲಸ ಮಾಡುತ್ತಿದ್ದಾರೆ. ಮತ್ತು ತಮ್ಮ ಸುತ್ತಮುತ್ತ ನಡೆಯುತ್ತಿರುವ ಇಂಥಹ ಮಹತ್ ಕಾರ್ಯಗಳನ್ನು ಗಮನಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ.

ಬೇರೆಯವರಿಗೆ ಯಾವುದೇ ವಿಷಯವನ್ನು ವಿವರಿಸಬಯಸಿದರೆ ಮೊದಲು ನಾವು ಆ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲವಾದರೆ ನಾವು ಅವರಿಗೆ ಅಪಕಾರ ಮಾಡಿದಂತಾಗುತ್ತದೆ.

**13.09.2009**

ಕೆಲವು ಸ್ವಾರ್ಥಪರ ಮಾನವರಿಂದ ಪ್ರಾರಂಭಿಸಲ್ಪಟ್ಟ ಕಂದಾಚಾರಗಳು ಕೊನೆಯಾಗುವ ಕಾಲ ಈಗ ಬಂದಿದೆ. ಅಮರರು ನಮ್ಮ ಮುಂದೆ ಸತ್ಯವನ್ನು ತೆರೆದಿಟ್ಟಿದ್ದಾರೆ. ಅದನ್ನು ನಾವು ಅರ್ಥಮಾಡಿಕೊಂಡರೆ ಸೂಕ್ತವಾದ ವಿಷಯವನ್ನೇ ಆರಿಸಿಕೊಳ್ಳುತ್ತೇವೆ.

ಸೃಷ್ಟಿಯಲ್ಲಿ ಉಂಟಾಗುವ ತಿದ್ದುಪಡಿಗಳನ್ನು ನಾನು ಹೇಳಬಯಸುತ್ತೇನೆ. ಗತಕಾಲದ ವಿಷಯ ಗಳೆಲ್ಲ ಅಳಿಸಿಹೋಗುವ ಸಾಧ್ಯತೆ ಇರುವುದರಿಂದ, ಇನ್ನು ಮುಂದೆ ಆಕಾಶಿಕ ದಾಖಲೆಗಳು ಯಾವುದೂ ಇಲ್ಲದಿರಬಹುದು. ಇದೇ ಜನ್ಮದಲ್ಲಿ ಕರ್ಮಗಳನ್ನು ಸವೆಸಬೇಕಾಗಿರುವುದರಿಂದ ಮತ್ತೆ ಜನ್ಮ ಪಡೆಯುವ ಅವಶ್ಯಕತೆ ಇರುವುದಿಲ್ಲ. ನಾವು ಋಷಿಗಳಿಗೆ ಸೇವೆ ಮಾಡಲು ಅಥವಾ ಬೇರೆಯವರಿಗೆ ಸಹಾಯ ಮಾಡಲು ಬಯಸಿದಾಗ ಮಾತ್ರ ಪುನರ್ಜನ್ಮ ಪಡೆಯುತ್ತೇವೆ. ಆತ್ಮ-ಸಂಗಾತಿಗಳ ಬಗ್ಗೆ ಇರುವ ನಿಯಮ ಬದಲಾವಣೆಯಾಗುತ್ತದೆ.

ನಮ್ಮ ಅಂತರಾಳದಲ್ಲಿ ನಿಶ್ಚಲತೆಯನ್ನು ಹೊಂದಿದ್ದೇವೆ. ನಾವು ಮಂತ್ರವನ್ನು ಪುನರುಚ್ಚರಿಸಿ ಧಾರಣವನ್ನು ಅಭ್ಯಾಸ ಮಾಡಿದ ನಂತರ ನಿಶ್ಚಲತೆಯ ಸ್ಥಿತಿಯನ್ನು ಪ್ರವೇಶಿಸುತ್ತೇವೆ. ವಿಶ್ವದ ಅಂತರಾಳದಲ್ಲಿರುವ ನಿಶ್ಚಲತೆಯೊಂದಿಗೆ ಸಂಪರ್ಕ ಮಾಡಿದ ನಂತರ ನಾವು ಅಮಿತಪ್ರೇಮ, ಶಾಂತಿ, ಆಧ್ಯಾತ್ಮಿಕ ಮತ್ತು ಒಳ್ಳೆಯದೆಲ್ಲವನ್ನು ಪಡೆಯುತ್ತೇವೆ. ನಾವು ನಿಶ್ಚಲತೆಯನ್ನು ಸ್ಥಾಪಿಸಲು ಧ್ಯಾನ ಮಾಡುತ್ತೇವೆ. ಇದು ನಮ್ಮ ಸುತ್ತಮುತ್ತ ಲಿರುವ ಅತ್ಯುನ್ನತ ಮತ್ತು ಆಳವಾದ ನಿಶ್ಚಲತೆ ಯೊಂದಿಗೆ ಸಂಪರ್ಕಿಸಲು ಸಹಾಯ ಮಾಡುತ್ತದೆ. ಈ ಸೃಷ್ಟಿಯ ಮೂಲದೊಂದಿಗೆ ಸಂಪರ್ಕ ಮಾಡಲು ಮತ್ತು ಕಲ್ಪನೆಗೂ ಮೀರಿದ ನಿಶ್ಚಲತೆ ಯೊಂದಿಗೆ ಸಂಪರ್ಕಿಸಲು ಸಾಧ್ಯವಾಗುತ್ತದೆ.

ಈ ಭೂಮಿಯ ಮೇಲಿರುವ ಎಲ್ಲಾ ಗುಣಾತ್ಮಕ ಮತ್ತು ಅತ್ಯದ್ಭುತಗಳ ಹಾಗೂ ನಾವೆಲ್ಲರೂ ಒಂದೇ ಎಂಬ ಅರಿವು ಮೂಡಿದಾಗ, ಏಕತೆಯನ್ನು ಅನುಭವಿಸಲು ಸಾಧ್ಯ. ಇದು ಕತ್ತಲೆಯನ್ನು ಹೋಗಲಾಡಿಸಲು ನೆರವಾಗುತ್ತದೆ ಮತ್ತು ಈ ಭೂಮಿಯ ಮೇಲಿರುವ ಕತ್ತಲೆಯನ್ನು ಓಡಿಸಲು ಕಾಲ ಸನ್ನಿಹಿತವಾಗಿದೆ. ನಾವು ಏಕತೆಯನ್ನು ಅನುಭವಿಸಿದರೆ ಋಷಿಗಳಿಂದ ಹೆಚ್ಚಿನ ಚೈತನ್ಯಗಳನ್ನು ಪಡೆಯಬಹುದು.

ನಾವು ಸಾಧನೆ ಅಥವಾ ಕೆಲಸವನ್ನು ಕೈಗೊಂಡಾಗ ವೈಯುಕ್ತಿಕವಾದುದನ್ನೆಲ್ಲಾ ಪಕ್ಕಕ್ಕಿಟ್ಟು, ಅಹಂ-ಅನ್ನು ತ್ಯಜಿಸಿ ಋಷಿಗಳ ಕೈಯಲ್ಲಿನ ಸಾಧನಗಳಾಗಬೇಕು. ನಾವು ಮಾದರಿಯಾಗಿ ಬಾಳುತ್ತ, ಭವಿಷ್ಯದಲ್ಲಿ ಜನರಿಗೆ ಮಾರ್ಗದರ್ಶನ ಮಾಡುವ ನಮ್ಮ ಪಾತ್ರಗಳ ಬಗ್ಗೆ ಎಚ್ಚರವಾಗಿರಬೇಕು.

ನಾವು ಸಾಧನೆಯನ್ನು ಕೈಗೊಂಡಾಗ ಅನುಮಾನಗಳು ಮತ್ತು ಪ್ರಶ್ನೆಗಳು ಹುಟ್ಟುವುದು ಸಹಜ. ಸಹನೆಯಿಂದ ಇರಿ. ನಮ್ಮ ಪುಸ್ತಕಗಳನ್ನು ಓದಿ. ನಿಮ್ಮ ಪ್ರಗತಿಗೆ ಅಡ್ಡಿಯಾಗುವ ಅತಿಯಾದ ವಿಶ್ಲೇಷಣೆಯನ್ನು ತ್ಯಜಿಸಿ.

ನಿಮ್ಮ ಪ್ರಗತಿಯನ್ನು ನಿರ್ಧರಿಸುವ ಅತ್ಯಂತ

## ಗುರೂಜಿಯವರ ನುಡಿಗಳು

**(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ವಿಶ್ವನಾಥ್ ಎಂ. ಎನ್)**

ಸೂಕ್ತ ವ್ಯಕ್ತಿ ಎಂದರೆ ನೀವೆ ಮತ್ತು ಅದಕ್ಕೆ ಏಕೈಕ ಮಾನದಂಡ ಅಹಂ. ನಾವು ಅಹಂನ ಮಟ್ಟವನ್ನು ಕಡಿಮೆ ಮಾಡಿದ್ದಾದರೆ ಉನ್ನತ ಪ್ರಗತಿಯನ್ನು ಗಳಿಸಬಹುದು.

**20.09.2009**

ನಾವು ಪಾಲಿಸಬೇಕಾದ ಕೆಲವು ಪ್ರಮುಖ ಸೂಚನೆಗಳು ಹೀಗಿವೆ:

ನಾವೆಲ್ಲ ರಕ್ಷಾಕವಚಗಳನ್ನು ಹೊಂದಿದ್ದೇವೆ. ಪ್ರತಿದಿನವೂ ಈ ಕವಚವನ್ನು ಅರ್ಧ ಘಂಟೆಯ ಕಾಲ ಬಲಪಡಿಸಬೇಕಾಗಿದೆ. ಒಬ್ಬ ವ್ಯಕ್ತಿ 3 ಘಂಟೆಗಳ ಕಾಲ ಧ್ಯಾನ ಮಾಡುತ್ತಿದ್ದರೆ, ಅವರು ಮೊದಲು ಅರ್ಧ ಘಂಟೆಯ ಕಾಲ ಕವಚವನ್ನು ಬಲಪಡಿಸಿ, ನಂತರ ಧ್ಯಾನಮಾಡಬೇಕು. ಬೇರೆ ಹಂತಗಳಲ್ಲಿ ಧ್ಯಾನಿಸುವವರು, ಅರ್ಧ ಘಂಟೆಯ ಕಾಲ ಕವಚವನ್ನು ಬಲಪಡಿಸಬೇಕು ಮತ್ತು ಬೇರೆ ಸಮಯದಲ್ಲಿ ನಿಗದಿತ ಅವಧಿಗೆ ಧ್ಯಾನ ಮಾಡಬೇಕು. ಮೊದಲು ಆರಂಭದ ಅಭ್ಯಾಸಗಳನ್ನು ಮಾಡಿ, ಕವಚವನ್ನು ಬಲಪಡಿಸಿ ನಂತರ ಧ್ಯಾನಿಸಬೇಕು.

ಚಾನಲ್ ಮಾಡುವುದು ಸಾಧನೆಯ ಒಂದು ಭಾಗವಾಗಿದೆ.

ಅತ್ಯಂತ ಹೊಸ ಮತ್ತುಮಹತ್ವದ ಬೆಳವಣಿಗೆಗಳು ಸಂಭವಿಸುತ್ತಿವೆ. ನಾವು ಪಡೆಯುವ ದಿವ್ಯಜ್ಞಾನದ ಅನೇಕ ವಿಷಯಗಳನ್ನು ನಮ್ಮೊಳಗೇ ಇಟ್ಟು ಕೊಳ್ಳೋಣ.

ನಾವು ಹೇಳುವವರೆಗೆ ಸೂಕ್ಷ್ಮ ಪ್ರಯಾಣವನ್ನು ಯಾರೂ ಮಾಡಬಾರದು.

ನೀವು ಮಾಂಸಾಹಾರವನ್ನು ತೆಗೆದು ಕೊಳ್ಳಬಾರದು. ಇದರ ಉದ್ದೇಶವೆಂದರೆ ನಿಮ್ಮನ್ನು ಯಾವಾಗಲೂ ರಕ್ಷಿಸುವುದು. ನಾವು ಪ್ರಜ್ಞಾಪೂರ್ವಕವಾಗಿ ಮತ್ತು ಇಡಿಯಾಗಿ ನಿಷೇಧತೆಯನ್ನು ತಿರಸ್ಕರಿಸಬೇಕು.

ಡಿಸೆಂಬರ್ 2009ರವರೆಗಿನ ಅವಧಿ ಅತ್ಯಂತ ಕಠಿಣಕರವಾಗಿದೆ. ಜಾಗರೂಕರಾಗಿರಿ. ಒಮ್ಮೆ ಅದನ್ನು ದಾಟಿದ ನಂತರ, ನಾವು ಸುರಕ್ಷಿತ. 2009 ರಿಂದ 2012ರ ಅವಧಿ ಕೂಡಾ ಭಿನ್ನವಾಗಿದೆ. ಅದು ಸುಲಭವೇನಲ್ಲ.

ರಾ–ಮಂದಿರದಲ್ಲಿ ನಾವು ಸಂಗ್ರಹಿಸಿರುವ ರಾ–ಚೈತನ್ಯಗಳನ್ನು ಪ್ರಪಂಚಕ್ಕೆ ಬಿಡುಗಡೆ ಮಾಡಲಾಗಿದೆ. ನಾವು ಧ್ಯಾನಿಸಿದಾಗ, ಪ್ರಾರ್ಥಿಸಿದಾಗ ಅಥವಾ ಇಂತಹ ಕಾರ್ಯಗಳಲ್ಲಿ ತೊಡಗಿದಾಗ ಆ ಚೈತನ್ಯಗಳನ್ನು ಪಡೆಯುತ್ತೇವೆ. 14ನೇ ಸೆಪ್ಟೆಂಬರ್‌ರಂದು 4.30 ಘಂಟೆಗೆ ನಮ್ಮ ಧ್ಯಾನಾಭ್ಯಾಸಿಗಳು ಈ ಚೈತನ್ಯಗಳನ್ನು ಪಡೆದರು. ಇದು ಬೇರೆ ಇನ್ನೊಂದು ವಿಶ್ವದಿಂದ ಬಂದ ಅತ್ಯಂತ ಉನ್ನತ, ವಿಶೇಷ ಮತ್ತು ನೂತನ ಚೈತನ್ಯಗಳು. ಇವು ಅನೇಕ ರೀತಿಯಲ್ಲಿ ಸಹಾಯ ಮಾಡುತ್ತವೆ. ನಾವು ಯಾವುದೇ ಬದಲಾವಣೆಯನ್ನು, ಒಳಿತನ್ನು ತಡೆಯುತ್ತೇವೆ ಮತ್ತು ತಪ್ಪನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಇದು ಘರ್ಷಣೆ ಉಂಟು ಮಾಡಿ ಯಾವುದೇ ಮಟ್ಟದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡುತ್ತದೆ. ಏನೇ ಸಂಭವಿಸಿದರೂ ದಿಕ್ಕೆಡಬೇಡಿ. ನೀವು ದೇವರ ಕೈಯಲ್ಲಿ ಮತ್ತು ರಾ–ಚೈತನ್ಯಗಳಲ್ಲಿ ಸುರಕ್ಷಿತರಾಗಿದ್ದೀರಿ. ಶುದ್ಧೀಕರಣದ ವಿಧಾನವು ಭಿನ್ನ ಮಟ್ಟಗಳಲ್ಲಿ ಈ ಎಲ್ಲ ವಿಚಲನೆಗಳನ್ನು ಒಳಗೊಂಡಿರುತ್ತದೆ.

ತ್ರಾಟಕವನ್ನು ಅಭ್ಯಾಸ ಮಾಡುವಾಗ ನಿಮ್ಮ ದೃಷ್ಟಿಯನ್ನು ಬಳಲುವ ಹಾಗೆ ಬದಲಿಸಬಾರದು. ನೀವು ನೇರವಾಗಿ ನೋಡಿ ಮತ್ತು ಕಣ್ಣುಗಳನ್ನು ಮುಚ್ಚಿಕೊಳ್ಳಿ, ತ್ರಾಟಕವನ್ನು ಸೂಕ್ತವಾದ ರೀತಿಯಲ್ಲಿ ಅಭ್ಯಾಸ ಮಾಡಿದರೆ ಸುಲಭವಾಗಿ ಮೌನವನ್ನು ಪ್ರವೇಶಿಸುತ್ತೇವೆ.

ನಿನ್ನೆಯ ದಿನ ಗೊಲ್ಲಹಳ್ಳಿಯಲ್ಲಿ ದುರಸ್ತಿಯಾಗಿರುವ ದೇವಸ್ಥಾನದಲ್ಲಿ ಎಲ್ಲಮ್ಮ ದೇವಿಯ ಸಿಂಹಾಸನಾರೋಹಣವಾಯಿತು. ಋಷಿಗಳು ಆ ದೇವಿಗೆ ಅನೇಕ ಶಕ್ತಿಗಳನ್ನು ಮತ್ತು ಸೂಚನೆಗಳನ್ನು ನೀಡಿದರು. ಅವಳು ನಮ್ಮನ್ನು ಎಲ್ಲ ರೀತಿಯಲ್ಲಿ ರಕ್ಷಿಸುವಳು.

**27.09.2009**

ಉನ್ನತ ಜ್ಞಾನವು ಎಲ್ಲ ಪ್ರದೇಶಗಳ ಬರಹಗಳಲ್ಲಿ ದೊರೆಯುತ್ತದೆ. ನಾವು ಮತ್ತು ಅನೇಕ ಅದ್ಭುತ ಜನರಿಂದ ಗ್ರಹಿಸಿದ ಜ್ಞಾನ, ವೇದಗಳ ಒಂದು ಭಾಗವಾಗುತ್ತದೆ ಮತ್ತು ಅದು ನಿರಂತರವಾಗಿ ಬೆಳೆಯುತ್ತಿದೆ. ಇದನ್ನು ಒಂದು ಪುಸ್ತಕವಾಗಿ ಅಥವಾ ಒಂದು ಸಂಪುಟಗಳಲ್ಲಿ ಹೊರ ತರುವ ಕಾಲ ಬಂದಿದೆ.

ಬುದ್ಧಿಶಕ್ತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಹತೋಟಿಯಿರದ ಊಹೆಗೆ ಎಡೆಮಾಡಿಕೊಡುತ್ತದೆ. ಬುದ್ಧಿಶಕ್ತಿ ಮತ್ತು ಅನುಭವವನ್ನು ಮೀರಿ ಹೋಗಲು ಇದು ಪ್ರಶಸ್ತವಾದ ಸಮಯವಾಗಿದೆ. ಏಕೆಂದರೆ ಅನುಭವ ಮಾತ್ರ ಪ್ರೇಮ, ಪ್ರಜ್ಞೆ ಮತ್ತು ಇತರ ವಾಸ್ತವಾಂಶಗಳ ಬಗ್ಗೆ ನಿಜವಾದ ಜ್ಞಾನವನ್ನು ತರುತ್ತದೆ. ನೇರವಾಗಿ ಜ್ಞಾನವನ್ನು ಪಡೆಯಲು ಅನುಭವಿಸುವ ಆಯಾಮಕ್ಕೆ ನಾವು ಪ್ರವೇಶಿಸಬೇಕು. ಪ್ರಕೃತಿ, ಚಂದ್ರ, ಭೂಮಿ, ಗಾಳಿ, ಬೆಂಕಿ ಇತ್ಯಾದಿ ಎಲ್ಲವನ್ನು ಅನುಭವಿಸಬೇಕು. ನಂತರ ಒಂದು ರೀತಿಯ ಸಂಪರ್ಕ ಉಂಟಾಗುತ್ತದೆ.

ಗೀತೆಯಲ್ಲಿ ಯೋಗಿಯಾದವನು ಮಾನವ ನಿಯಮಗಳಿಗೆ ಮೀರಿದವನೆಂದು ವಿವರಿಸಲಾಗಿದೆ. ಯಾವುದೇ ಕಾಲದಲ್ಲಾಗಲಿ ನಾವು ಮಾನವ ನಿಯಮಗಳಿಗೆ ಒಳಪಡದಿದ್ದರೆ, ಆಗ ನಾವು ಉನ್ನತ ನಿಯಮಗಳಿಗೆ ಬದ್ಧರಾಗಿರುತ್ತೇವೆ. ಒಬ್ಬ ಯೋಗಿ ಉನ್ನತ ನಿಯಮಗಳನ್ನು ಅನುಸರಿಸುವುದರಿಂದ ಅವನಿಗೆ ಮಾನವ ನಿಯಮಗಳು ಅನ್ವಯಿಸುವುದಿಲ್ಲ. ಋಷಿ ಕಾರ್ಯಕರ್ತರು ಜನ್ಮ ತಳೆದಾಗ, ಅವರು ಎಲ್ಲ ಮಾನವ ನಿಯಮಗಳನ್ನು ಪಾಲಿಸಿ, ಉನ್ನತ ಕಾರ್ಯಗಳನ್ನು ಮಾಡಿ, ಮಾದರಿಯಾಗಿ ಬದುಕುತ್ತಾರೆ. ಅವರು ಅತ್ಯಂತ ಕಷ್ಟದ ಜೀವನ ವಿಧಾನಗಳನ್ನು ಆರಿಸಿಕೊಳ್ಳುತ್ತಾರೆ. ಇಂಥ ಕೆಲಸಗಾರರ ಮೇಲೆ ಮತ್ತು ಋಷಿಗಳ ಮೇಲೆ ದೇವರಿಗೆ ವಿಶೇಷ ಒಲವು. ಅವರು ದೇವರಿಗೆ ಅತ್ಯಂತ ಸನ್ನಿಹಿತ. ಅವರು ನಮಗೆ ಚೆನ್ನಾಗಿ ಮಾರ್ಗದರ್ಶನ ನೀಡಬಲ್ಲರು.

ನಾವು 21 ಡಿಸೆಂಬರ್ 2009 ರಿಂದ ನಮ್ಮ ವಿವೇಕ ಮತ್ತು ಆತ್ಮಬಲಗಳ ಆಧಾರದ ಮೇಲೆ ಜೀವನದ ಜೊತೆ ವ್ಯವಹರಿಸಬೇಕು. ಒಂದು ವೇಳೆ ತಪ್ಪಾದರೂ ಸರಿ ನಾವು ಹೆಜ್ಜೆಯಿಡಲು ಪ್ರಾರಂಭಿಸಬೇಕು. ನಾವಾಗಿಯೇ ಆರಿಸಿಕೊಳ್ಳಬೇಕು ಮತ್ತು ಹೊಣೆಗಾರಿಕೆಯನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ಎದುರಿಸಬೇಕು. ಪ್ರತಿಹಂತದಲ್ಲಿ ಋಷಿಗಳ ಅಭಯಹಸ್ತವಿದ್ದೇ ಇರುತ್ತದೆ.

ಇಲ್ಲಿ, ಈ ಮಾರ್ಗದಲ್ಲಿ, ಅತ್ಯಂತ ಸಂಕೀರ್ಣವಾದುದನ್ನು ಸರಳ ಮಾಡಿ ಹೇಳಲಾಗುವುದು. ನಾವು ವಾಸ್ತವಾಂಶಗಳನ್ನು ಮತ್ತು ಇತರ ವಿಷಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಈ ಮಾರ್ಗದರ್ಶನದಲ್ಲಿ ನಮ್ಮನ್ನು ನಾವು ಸುಲಭವಾಗಿ ತಯಾರು ಮಾಡಿಕೊಳ್ಳಬಹುದು. ಸಿದ್ಧ ಮಾಡಿಕೊಳ್ಳುವುದು ನಮ್ಮ ಜವಾಬ್ದಾರಿ.

2012ನ್ನು ದಾಟಲು, ನಾವು ಮಾಡುತ್ತಿರುವ ಪ್ರಯತ್ನಗಳು ಸಾಲದು. ನಮಗೆ ತಾಳ್ಮೆ ಇರಬೇಕು. ಇದು ವಿಶ್ವಾಸದಿಂದ ಬರುತ್ತದೆ. ವಿಶ್ವಾಸ ಪ್ರೇಮದಿಂದ ಬರುತ್ತದೆ. ಎಲ್ಲ ತತ್ವಗಳನ್ನು ಅಭ್ಯಾಸಮಾಡಿ, ತಯಾರಾಗಿ, ಎದ್ದು ನಿಲ್ಲಿ ಮತ್ತು ಮುಂದಕ್ಕೆ ಚಲಿಸಿ.

ನಾವು 2012ರ ಬಗ್ಗೆ ಹೆಚ್ಚಿನ ಜ್ಞಾನವನ್ನು ಒದಗಿಸಿದ್ದೇವೆ ಮತ್ತು ನೀವು ದಿಕ್ಕೆಡುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಪ್ರಾಮಾಣಿಕತೆ ಮತ್ತು ಒಳ್ಳೆಯವರಾಗಿರಲು ಆರಿಸಿಕೊಳ್ಳಿ. ದೇವರೊಂದಿಗೆ ಸಂಪರ್ಕಿಸಿ, ನಿಮಗೆ ಎಲ್ಲ ಬಗೆಯ ರಕ್ಷಾಕವಚಗಳು ಲಭ್ಯವಾಗುತ್ತವೆ. ಮಾನವ ಜನಾಂಗಕ್ಕೆ ಸಹಾಯ ಮಾಡಲು ಭವಿಷ್ಯತ್ತಿನ ನಾಯಕರು ನಾವು ಎಂಬುದನ್ನು ನೆನಪಿನಲ್ಲಿಡೋಣ.

ಅಹಂಕಾರ ಬಹಳ ದೊಡ್ಡ ಅಡಚಣೆಯಾಗಿದೆ. ಒಬ್ಬ ಯುವಕ ಅಹಂಕಾರದಿಂದ ಕೂಡಿದ್ದರೆ, ಸಿದ್ಧವಾಗುತ್ತಿರುವ ಅಮಾನುಷನಂತೆ. ನಾವು ಅಹಂಕಾರವನ್ನು ಪಕ್ಕಕ್ಕಿಟ್ಟು ಸ್ವಲ್ಪ ವಿನಯವನ್ನು ಬೆಳೆಸಿಕೊಂಡರೆ, ಆಗ ನಾವು ಅಮಾನುಷರಾಗುವುದಿಲ್ಲ. ಅತ್ಯಂತ ಜಾಗರೂಕರಾಗಿರೋಣ.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ವರ್ಷಾ ಗುರ್ಜಾರ್**

'Beyond 2012' ಪುಸ್ತಕವು '2012– ಅಂತ್ಯ ಅಥವಾ ಆರಂಭ' ಕ್ಕಿಂತ ಹೆಚ್ಚಿನ ಜ್ಞಾನ ಹೊಂದಿದೆ. ಇದರಲ್ಲಿರುವ ಹೊಸ ಮಾಹಿತಿ ನಮ್ಮನ್ನು ಮೂಕರನ್ನಾಗಿಸುತ್ತದೆ. ನೀವು ಇದು ಎಲ್ಲರಿಗೂ ದೊರಕುವಂತೆ ಮಾಡಿದ್ದೀರಿ. ನೀವು ಮತ್ತು ಋಷಿಗಳು ಮನುಕುಲಕ್ಕೆ ಹಾಗೂ ವಿಶ್ವಕ್ಕೆ ಮಾಡುತ್ತಿರುವ ಸಹಾಯಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. –ಖುರ್ಷೀದ್

'Beyond 2012' ಪುಸ್ತಕ ಓದುವಾಗ ನನಗೆ ವಿಭಿನ್ನ ಅನುಭವವಾಯಿತು. ಈ ಪುಸ್ತಕ ಓದಲು ಆರಂಭಿಸಿದ ತಕ್ಷಣ, ನನ್ನ ಪ್ರಜ್ಞೆಯು ಉನ್ನತ ಮಟ್ಟಕ್ಕೆ ಏರಿತು. ನಾನು ತೆರೆದ ಕಣ್ಣಿನಿಂದ ನೋಡುತ್ತಲೇ ಇದ್ದೆ. ಅದನ್ನು ಓದುತ್ತಿರುವಷ್ಟು ಸಮಯವೂ ನಾನು ತುಂಬಾ ಚೈತನ್ಯವನ್ನು ಪಡೆದೆ. ಅದೊಂದು ಅಪರೂಪದ ಹಾಗೂ ಸುಂದರವಾದ ಅನುಭವವಾಗಿತ್ತು. –ಅರ್ಚನಾ ಪಿಳ್ಳೈ

ನಿಮ್ಮೊಂದಿಗೆ ಸಂಪರ್ಕ ಏರ್ಪಡಿಸುವ ಮತ್ತು ನಿಮ್ಮ ಮಾರ್ಗದರ್ಶನದ ಕೊಂಡಿಯಂತಿರುವ DVDಗಳಿಗಾಗಿ ನಾವು ಪ್ರತಿ ತಿಂಗಳೂ ಕಾತುರದಿಂದ ಕಾಯುತ್ತಿರುತ್ತೇವೆ. ಅವು ನೇರ ಮತ್ತು ವೈಯಕ್ತಿಕ ಸಂಪರ್ಕ ಹೊಂದಿರದ ನಮ್ಮಂತಹ ದೂರ ಕಲಿಕೆಯ ಸಾಧಕರಿಗೆ ಜೀವನಾಧಾರದಂತಿವೆ. –ಶುಭದಾ ಲಿಮಯೆ

ಅತ್ಯಂತ ಉಪಯುಕ್ತ ಮಾಹಿತಿಗಳನ್ನೊಳಗೊಂಡ ನಿಮ್ಮ DVDಗಳು ದೂರಕಲಿಕೆಯ ಸಾಧಕರಿಗೆ ಅತ್ಯಮೂಲ್ಯವಾಗಿದೆ. DVDಗಳನ್ನು ವೀಕ್ಷಿಸಿದ ನಂತರ ನನ್ನ ಎಲ್ಲಾ ಸಂದೇಹ ಮತ್ತು ಪ್ರಶ್ನೆಗಳಿಗೆ ಉತ್ತರಗಳು ದೊರಕಿವೆ. –ಪ್ರಭಾಕರ್ ಆಪ್ಟೆ

ದೂರಕಲಿಕೆಯ ಸಾಧಕರ ಎಲ್ಲಾ ಜವಾಬ್ದಾರಿಯನ್ನು ನೀವು ತೆಗೆದುಕೊಂಡಿದ್ದೀರಿ. ಇದಕ್ಕಾಗಿ ನಿಮಗೆ ಧನ್ಯವಾದಗಳು. ಇದು ನಿಜವಾಗಿಯೂ ನಮಗೆ ಬಹಳ ನೆಮ್ಮದಿ ತಂದಿದೆ. ನಿಮ್ಮ ಪ್ರತಿಯೊಂದು ಮಾತು ಅತ್ಯಮೂಲ್ಯವಾದುದು. ಈ DVDಗಳು ನಾವು ತರಗತಿಗಳಿಗೆ ಹಾಜರಾಗದಿರುವ ಕೊರತೆಯನ್ನು ನೀಗಿವೆ. ನೀವು ಕೊಟ್ಟಂತಹ ಹೊಸದಾದ ಮತ್ತು ದಿವ್ಯಜ್ಞಾನವನ್ನು ಪುನಃ ಪುನಃ ಕೇಳದೇ, ಅರ್ಥಮಾಡಿಕೊಳ್ಳುವುದು ಅಸಾಧ್ಯ. ಪ್ರತಿಸಾರಿ ನಿಮ್ಮ ಸಂದೇಶಗಳನ್ನು ಕೇಳಿದಾಗ, ಅದು ಹೊಸ ಆಯಾಮವನ್ನು ತೆರೆಯುತ್ತದೆ. – ಶಾಂತಾ ಕುಮಾರಿ

ನಾನು ವಿಮಾನದಲ್ಲಿ ಪ್ರಯಾಣ ಮಾಡುವಾಗಲೆಲ್ಲಾ, ಸದಾ ಸುರಿಯುವ ಮೂಗಿನ ತೊಂದರೆಗಾಗಿ, ಹಲವಾರು ಟಿಶ್ಯೂ ಪ್ಯಾಕೆಟ್‌ಗಳನ್ನು ನನ್ನೊಂದಿಗೆ ಒಯ್ಯುತ್ತೇನೆ. ವಿಚಿತ್ರವೆಂದರೆ ಈ ಸಾರಿ ಎರಡು ವಾರಗಳ ಮೆಕ್ಸಿಕೋ ಪ್ರವಾಸ ಸಮಯದಲ್ಲಿ ಈ ತೊಂದರೆ ಕಾಣಿಸಿಕೊಳ್ಳಲಿಲ್ಲ. ನನ್ನ ಸುತ್ತ ಒಂದು ಅದೃಶ್ಯ ಕವಚ ಇರುವ ಹಾಗೆ ನನಗೆ ಅನಿಸಿತು. ಮನೆಗೆ ಹಿಂತಿರುಗಿದಾಗ ನಿಮ್ಮ ಮೇಲ್‌ನಲ್ಲಿ 'ರಕ್ಷಾಕವಚ' ಎಂಬ ಪದ ನೋಡಿ ಆಶ್ಚರ್ಯವಾಯಿತು!

'Beyond 2012' ಪುಸ್ತಕ ನಾನು ಹೇಗೆ ಬದಲಾಗಬೇಕೆಂಬ ಸ್ಪಷ್ಟ ಚಿತ್ರಣವನ್ನು ನೀಡಿತು. ನಾನು, ಬದಲಾಗಬೇಕು ಇಲ್ಲವೇ ನಾಶವಾಗಬೇಕು ಮತ್ತು ಅದಕ್ಕಾಗಿ ತಯಾರಾಗಿರಬೇಕು ಎಂಬ ಪರಿಸ್ಥಿತಿಯಲ್ಲಿ ಇರುವುದಾಗಿ ಅನಿಸಿತು. ನಿಮ್ಮ ಈ ಅನುಗ್ರಹಕ್ಕಾಗಿ ನಾನು ಆಭಾರಿಯಾಗಿದ್ದೇನೆ.

– ಲಿನ್ ಕರಾಟನಿ

ನನ್ನ ಕನಸಿನಲ್ಲೊಮ್ಮೆ ಬಿಳೀ ಗಡ್ಡವನ್ನು ಹೊಂದಿದ ಶ್ವೇತ ವಸ್ತ್ರಧಾರಿ ವ್ಯಕ್ತಿ ಬಂದು "ಏನೇ ಆದರೂ ಅದು ನಿನ್ನ ಒಳ್ಳೆಯದಕ್ಕೆ" ಎಂದು ಹೇಳಿದರು. ನಂತರ ಅದು ನೀವೇ ಎಂದು ನನಗೆ ತಿಳಿಯಿತು. 'ಬೆಳಕಿಗೆ ಬಾಗಿಲುಗಳು' ಪುಸ್ತಕ ಓದಿದ ನಂತರ ನಿಮ್ಮ ಪಾದಸ್ಪರ್ಶ ಮಾಡುವ ಬಲವಾದ ಬಯಕೆ ಉಂಟಾಯಿತು. ಒಂದು ತಿಂಗಳೊಳಗೆ ನೀವು ಮುಂಬೈಗೆ ಭೇಟಿಕೊಟ್ಟಿರಿ! ನಿಮ್ಮನ್ನು ಭೇಟಿ ಮಾಡಿದ ನಂತರ ನನ್ನ ಜೀವನ ಬದಲಾಯಿತು. ಪ್ರತಿಯೊಂದು ಅಡಚಣೆಯೂ ನಾವು ಸಕಾರಾತ್ಮಕರಾಗಲು ಬರುವ ಒಂದು ಅವಕಾಶ ಎಂದು ನನಗನಿಸುತ್ತದೆ. ನಿಮ್ಮ ಮಾರ್ಗದರ್ಶನಕ್ಕಾಗಿ ಧನ್ಯವಾದಗಳು. ಈಗ ನನ್ನಲ್ಲಿ ಶಾಂತಿ ಮತ್ತು ಸಹನೆ ತುಂಬಿವೆ. ನನ್ನ ಕನಸುಗಳನ್ನು ಸಾಕಾರಗೊಳಿಸಲು ಶಕ್ತಿ ದೊರಕಿದೆ.

–ಗೀತಾ ಜೋಶಿ

ಪ್ರತಿದಿನ 'ಲೈಟ್ ಚಾನಲ್' ಮಾಡುವುದರಿಂದ ಅಸಾಧಾರಣ ಲಾಭ ಉಂಟಾಗಿದೆ. ಬೆಳಕು ನಮ್ಮ ಪ್ರತಿಯೊಂದು ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿಯಾಗಿದೆ. ನಾವೀಗ ಪರಿಶುದ್ಧರಾದಂತೆ ಅನಿಸುತ್ತಿದೆ. ನಾವು Self-healing ಕೂಡಾ ಅಭ್ಯಾಸ ಮಾಡುತ್ತಿದ್ದೇವೆ. ನಿಮ್ಮ ಆಶೀರ್ವಾದ ಮತ್ತು ದಿವ್ಯ ಪ್ರೇಮದಿಂದ ನಮ್ಮ ಜೀವನ ಮಟ್ಟವು ಸುಧಾರಿಸಿದೆ. ಇದಕ್ಕಾಗಿ ನಿಮಗೆ ಧನ್ಯವಾದಗಳು. ನಾವು 'ಲೈಟ್ ಚಾನಲ್ಸ್ ವಿಶ್ವ ಸಂಚಲನ'ದ ಸಂದೇಶವನ್ನು ಹರಡಲು ಪ್ರಯತ್ನಿಸುತ್ತಿದ್ದೇವೆ.

–ದೇಸಾಯಿ

ಒಂದು ದಿನ ನಾನು ನಿಮ್ಮೊಂದಿಗೆ ಸಂಪರ್ಕಗೊಂಡಾಗ ಮಹತ್ತರ ಶಕ್ತಿಯಿಂದ ಕೂಡಿದ ಬೆಳಕು ನಿಮ್ಮಿಂದ ನನಗೆ ಹರಿದು ಬಂದಂತಹ ಅನುಭವವಾಯಿತು. ಮತ್ತು ನನ್ನನ್ನು ಉನ್ನತ ಸ್ಥಿತಿಗೆ ಕರೆದೊಯ್ದ ಅನುಭವವಾಯಿತು. ಇದು ನನಗೆ ಅತೀವ ಸಂತೋಷವನ್ನು ತಂದಿತು. ನನಗೆ ನೀಡಿದಂತಹ ಸಕಾಲಿಕ ಪ್ರೀತಿ, ರಕ್ಷಣೆ ಮತ್ತು ಭರವಸೆಗಾಗಿ ಧನ್ಯವಾದಗಳು. ನೀವು ನನಗೆ ನೀಡಿರುವ ನಿಯಮಗಳನ್ನು ಪ್ರಾಮಾಣಿಕವಾಗಿ ಅಭ್ಯಾಸ ಮಾಡಲು ಪ್ರಯತ್ನಿಸುತ್ತೇನೆ.

–ಅಭಿಷೇಕ್ ಪಟಾನ್ಕರ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಆಚರಣೆಗಳನ್ನು ಮಾಡುವುದು ತಪ್ಪೇ?**

ಉ: ಆಚರಣೆಗಳನ್ನು ಮಾಡುವುದು ತಪ್ಪಲ್ಲ ಆದರೆ ಈಗ ಅದರ ಅವಶ್ಯಕತೆಯಿಲ್ಲ. ಏಕೆಂದರೆ ನಮಗೆ ದೇವರನ್ನು ನೇರವಾಗಿ ಪೂಜಿಸುವ ವಿಧಾನ ತಿಳಿದಿದೆ.

**ಪ್ರ: ಭಯದ ಆಚೆ ಹೋಗುವುದು ಹೇಗೆ?**

ಉ: ನಾವು ದೈವಿಕತೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು, ಸಂಪರ್ಕ ಪಡೆದುಕೊಳ್ಳಬೇಕು, ಮತ್ತು ದೈವಿಕತೆಯೊಂದಿಗೆ ಬೇರೂರಬೇಕು. ಆಗ ನಮಗೆ ಎಲ್ಲ ತರಹದ ರಕ್ಷಣೆ ಮತ್ತು ಭದ್ರತೆ ಸಿಗುತ್ತದೆ, ಅಲ್ಲಿ ಭಯವಿರುವುದಿಲ್ಲ.

**ಪ್ರ: ನಾನು ನನ್ನ ಸಿಟ್ಟನ್ನು ಹೇಗೆ ನಿಯಂತ್ರಿಸುವುದು?**

ಉ: ಸಿಟ್ಟನ್ನು ನಿಯಂತ್ರಿಸಲು ಜಾಗೃತ, ನಿರಂತರ ಮತ್ತು ಸ್ಥಿರವಾದ ಪ್ರಯತ್ನದ ಅವಶ್ಯಕತೆಯಿದೆ. ನಾವು ಶಂಬಲ ತತ್ವಗಳನ್ನು ಅಭ್ಯಸಿಸಬೇಕು ಮತ್ತು ಸಿಟ್ಟುಗೊಳ್ಳದಂತೆ ಜಾಗೃತ ಪ್ರಯತ್ನವನ್ನು ಮಾಡಬೇಕು. ನಿಮಗೆ ಸಿಟ್ಟು ಬಂದಾಗ ಕೂಡಲೇ ಪ್ರತಿಕ್ರಿಯಿಸಬೇಡಿ, ಒಂದು ಕ್ಷಣ ತಡೆಯಿರಿ, ಪ್ರಜ್ಞಾಪೂರ್ವಕವಾಗಿ ಸಿಟ್ಟನ್ನು ಪಕ್ಕಕ್ಕಿಡಿ. ಆಗ ಪ್ರಾಯಶಃ ನೀವು ಅತ್ಯಂತ ಸಮರ್ಪಕವಾಗಿ ಪ್ರತಿಕ್ರಿಯಿಸಬಹುದು.

**ಪ್ರ: ನಾನು ಋಷಿಗಳ ಕೆಲಸಕ್ಕೆ ಸೇರಲು ಯೋಗ್ಯನೇ?**

ಉ: ಪ್ರತಿಯೊಬ್ಬರೂ ಯೋಗ್ಯರೇ.

**ಪ್ರ: ಅದಕ್ಕೆ ಅರ್ಹತೆಗಳೇನು?**

ಉ: ಎಲ್ಲಾ ಸ್ತರಗಳಲ್ಲೂ ಶುದ್ಧತೆ– ದೇಹ, ಮನಸ್ಸು ಮತ್ತು ಬುದ್ಧಿ; ಋಷಿಗಳ ಕೆಲಸದ ಬಗ್ಗೆ ಎಲ್ಲಾ ಕಾಲಕ್ಕೂ ಆಳವಾದ ಬದ್ಧತೆ ಇರಬೇಕು. ನಾವು ಋಷಿಗಳಿಗೆ ವಿಧೇಯರಾಗಿರಬೇಕು, ಏಕೆಂದರೆ ಅವರಿಗೆ ಗತಕಾಲ ಮತ್ತು ಭವಿಷ್ಯದ ಅರಿವಿರುತ್ತದೆ. ನಮ್ಮ ಅಹಂ–ಅನ್ನು ಬಿಡಬೇಕು. ನಾವು ಆಧ್ಯಾತ್ಮಿಕ ವಿಮೋಚನೆಯನ್ನು ಅಭ್ಯಸಿಸಬೇಕು, ಅದೇನೆಂದರೆ ಯುಗಾಂತರದಿಂದ ಬೆಳೆಸಿಕೊಂಡು ಬಂದಿರುವ ಎಲ್ಲಾ ಕುರುಡು ನಂಬಿಕೆಗಳು, ಮೂಢ ನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ದೂರವಿಡುವುದು. ನಾವು, ಧರ್ಮ ಒಂದು ಮತಾಚರಣೆಗಳ ಮತ್ತು ಕಂದಾಚಾರಗಳ ಗಂಟು ಎಂಬುದನ್ನು ಗುರುತಿಸುವ ಸಾಮರ್ಥ್ಯವನ್ನು ಪಡೆಯಬೇಕು ಮತ್ತು ಅದನ್ನು ಮೀರಿ ನಡೆಯಬೇಕು. ನಾವು ಅದರ ವಿಶಾಲತೆಯನ್ನು ಅನುಭವಿಸಬೇಕು ಮತ್ತು ನಮ್ಮ ಬದುಕಿನಲ್ಲಿ ತೋರಿಸಬೇಕು. ನಾವು ಬದಲಾವಣೆಯನ್ನು ಆರಿಸಿಕೊಳ್ಳಬೇಕು. ಪ್ರತಿಸಲ ನಾವು ಕಷ್ಟದಲ್ಲಿದ್ದಾಗ, ನಾವು ಋಷಿಗಳನ್ನು ಆರಿಸಿ ಕೊಳ್ಳಬೇಕು, ಸರಿಯಾದ ಸನ್ನಿವೇಶವನ್ನು ಆರಿಸಬೇಕು.

**ಪ್ರ: ಕೆಲಸಗಳು ಯಾವುವು?**

ಉ: ಕೆಲಸ: ಬೆಳಕನ್ನು ಅನುಭವಿಸುವುದು ಮತ್ತು ವ್ಯಕ್ತಗೊಳಿಸುವುದು. ಬೇರೆಯವರಿಗೆ ಬೆಳಕನ್ನು ಅನುಭವಿಸಲು ಸಹಾಯ ಮಾಡುವುದು ಮತ್ತು ಸತ್ಯ, ಪ್ರೀತಿ, ಶಾಂತಿ ತುಂಬಿದ ಬೆಳಕನ್ನು ವ್ಯಕ್ತಗೊಳಿಸುವುದು; ಹೊಸ ಜ್ಞಾನವನ್ನು ಚೆನ್ನಾಗಿ ಅರಿತುಕೊಂಡು ಬೇರೆಯವರಿಗೆ ಹರಡುವುದು; ಕಾಲಾನುಸಾರ ಋಷಿಗಳಿಂದ ಬರುವ ಸೂಚನೆಗಳನ್ನು ಪಾಲಿಸುವುದು. ನಾವು ಧ್ಯಾನ ಮಾಡಬೇಕು ಮತ್ತು ಹೆಚ್ಚು ಜನರನ್ನು ಧ್ಯಾನಕ್ಕೆ ಕರೆತರಬೇಕು; ನಮ್ಮ ವಾರ್ತಾಪತ್ರಿಕೆಯನ್ನು ಓದಬೇಕು, ಹೆಚ್ಚು ಚಂದಾದಾರರನ್ನು ತರಬೇಕು. ಇದು ಕೆಲಸದ ಒಂದು ಭಾಗ. ನಮ್ಮ ಪುಸ್ತಕಗಳನ್ನು ಹೆಚ್ಚು ಮಾರಾಟ ಮಾಡುವಲ್ಲಿ ಸಹಾಯ ಮಾಡಬೇಕು, ಏಕೆಂದರೆ ಈ ಜ್ಞಾನ ಹೆಚ್ಚು ಜನರಿಗೆ ತಲುಪಬೇಕು. ಸ್ವಯಂಸೇವಕರಾಗಿ ಮತ್ತು ಟೀಚರ್–ಗಳಾಗಿ ಕೆಲಸ ಮಾಡಿ. ಬೆಳಕನ್ನು ಚಾನಲ್ ಮಾಡಿ ಮತ್ತು ಹೆಚ್ಚು ಚಾನಲ್‌ಗಳನ್ನು ತನ್ನಿ. ಹೆಚ್ಚು ಹಣ ಇರುವವರು ನಮಗೆ ದಾನ ಮಾಡಬಹುದು.

**ಪ್ರ: ಎಲ್ಲಾ ಮಾನವರನ್ನು ಸಮನಾಗಿ ಸೃಷ್ಟಿಸಿಲ್ಲವೇ?**


ಉ: ಎಲ್ಲಾ ಮಾನವರನ್ನು ಸಮಾನಾಗಿ ಸೃಷ್ಟಿಸಿದ್ದಾರೆ. ದೇವರ ಪ್ರಪಂಚದಲ್ಲಿ ಎಲ್ಲರೂ ಸಮಾನರೇ. ಎಲ್ಲರಿಗೂ ಸದವಕಾಶಗಳಿರುತ್ತದೆ.

**ಪ್ರ: ಇಚ್ಛಾ ಸ್ವಾತಂತ್ರ್ಯ ಶಾಪವೇ?**

ಉ: ಅದು ಶಾಪವಲ್ಲ. ಅದೊಂದು ದೊಡ್ಡ ವರ ಆದರೆ ಅದು ಅತ್ಯಧಿಕವಾಗಿ ದುರುಪಯೋಗವಾಗಿರುವುದು. ನಾವು ಒಳ್ಳೆಯ ಅವಕಾಶಗಳಿದ್ದಾಗಲೂ, ಒಳ್ಳೆಯ ವಾತಾವರಣ ಒದಗಿಸಿದಾಗಲೂ ತಪ್ಪುಗಳನ್ನು ಮತ್ತು ತಪ್ಪು ಆಯ್ಕೆಗಳನ್ನು ಮಾಡುತ್ತೇವೆ. ❑

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis (containing 5 Booklets)<br>- How to Meditate - Dhyana Yoga<br>- Descent of Soul - Practising Shambala Principles<br>- Astral Ventures of A Modern Rishi | 250/- |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012 ನಂತರ | 100/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು)<br>– ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ<br>– ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ<br>– ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 250/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) 150/- | |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)

'ಗುರೂಜಿ ಸ್ಪೀಕ್ಸ್' ಪುಸ್ತಕದಲ್ಲಿ ಆಗಸ್ಟ್ 1982ರಂದು ಅಮರರವರು ಮರಣಕ್ಕೆ ಮುನ್ನ ಕೊನೆಯದಾಗಿ ಗುರೂಜಿಯವರೊಡನೆ ನಡೆಸಿದ ಸಂಭಾಷಣೆಯನ್ನು ಪ್ರಸ್ತಾಪಿಸಲಾಗಿದೆ. ಅದು ಬಹಳ ಹೃದಯಸ್ಪರ್ಶಿಯಾಗಿದೆ. ಆ ದೇವಮಾನವ ಅಮರರವರನ್ನು ಬದುಕಿರುವಾಗಲೇ ಸಂಧಿಸುವಷ್ಟು ಅದೃಷ್ಟಶಾಲಿ ನಾನಾಗಲಿಲ್ಲವಲ್ಲ ಎಂದು ನನಗನ್ನಿಸಿತು. ನಂತರ ಅಮರರವರ ಫೋಟೋದಿಂದ ನನ್ನ ಮೇಲೆ ಚೈತನ್ಯ ಹರಿದು ಬಂದಂತೆ ಕನಸಾಯಿತು. ಕನಸಿನಲ್ಲಿ ಅಮರರವರು ನನ್ನ ಪಕ್ಕದಲ್ಲೇ ನಿಂತು ನನ್ನ ಇಡೀ ದೇಹಕ್ಕೆ ಚೈತನ್ಯವನ್ನು ಹರಿಸಿದ ಅನುಭವವಾಯಿತು. ನನ್ನ ಬಯಕೆಯನ್ನು ಈ ರೀತಿ ಈಡೇರಿಸಿದ್ದಕ್ಕೆ ಹೃದಯ ತುಂಬಿ ಬಂದಿತು. – ಕಮಲ್ ಡಿ.

ನಾನು ಹಾಸಿಗೆಯಲ್ಲಿ ಮಲಗಿ, ಇನ್ನೂ ಎಚ್ಚರ ಇರುವಾಗಲೇ, ಭೌತಿಕ ದೇಹದಿಂದ ಹೊರಬಂದ ಅನುಭವವಾಯಿತು. ತಕ್ಷಣ ನನ್ನ ದೇಹ ಜೋರಾಗಿ ಕಂಪಿಸಲಾರಂಭಿಸಿತು. ನಾನು ನನ್ನ ದೇಹದಿಂದ ಹೊರಬಂದೆ ಮತ್ತು ಒಂದು ಉನ್ನತ ತರಂಗದಲ್ಲಿ ಸಂಚರಿಸಲಾರಂಭಿಸಿದೆ. ಅದು ನನ್ನ ಸೂಕ್ಷ್ಮ ಶರೀರವೆಂದು ನನಗೆ ಅರ್ಥವಾಯಿತು. ಮೊದಲಸಾರಿ ಸಾವಿನಂತಹ ಅನುಭವ ಆಗಿದ್ದು, ಆ ಭಯದಿಂದ ನನಗರಿವಿಲ್ಲದೆಯೇ ಸಪ್ತಋಷಿಗಳನ್ನು ಪ್ರಾರ್ಥಿಸಲು ಶುರುಮಾಡಿದೆ. ತಕ್ಷಣ ಕಂಪನ ನಿಂತಿತು. ಕಣ್ಣು ತೆರೆದು ನೋಡಿದರೆ ನಾನು ಹಾಸಿಗೆಯಲ್ಲೇ ಮಲಗಿದ್ದೆ. ಕೆಲವೇ ಕ್ಷಣಗಳ ಈ ಅನುಭವ ನಾನು ಈ ಶರೀರವಲ್ಲ ಎಂಬ ಅರ್ಥ ಮಾಡಿಸಿತು. – ಸುರೇಶ್ ಕುಮಾರ್

ಆಗಸ್ಟ್ 28ರಂದು ನಾನು ರಾ–ಚೈತನ್ಯಗಳನ್ನು ಚಾನಲ್ ಮಾಡುತ್ತಿದ್ದಾಗ ಯಾವುದೋ ಕಾರಣದಿಂದ ಅದನ್ನು ಮಧ್ಯದಲ್ಲೇ ನಿಲ್ಲಿಸಬೇಕಾಯಿತು. ನಾನು ನನ್ನ ಛಾಯಾವ್ಯಕ್ತಿಯನ್ನು, ರಾ–ಚೈತನ್ಯಗಳನ್ನು ಚಾನಲ್ ಮಾಡುವುದನ್ನು ಹಾಗೂ ಆನಂದ ಹರಡುವುದನ್ನು, ನನ್ನ ಪರವಾಗಿ ಮುಂದುವರೆಸುವಂತೆ ಬೇಡಿಕೊಂಡೆ. ಅದರ ಅನುಭವ ನನಗೆ ಇಡೀ ದಿನ ಆಗುತ್ತಿತ್ತು. ಆ ರಾತ್ರಿ ಮಲಗುವ ಮೊದಲು ನನ್ನ ಛಾಯಾವ್ಯಕ್ತಿ ನೀಲಿ ಬೆಳಕು ಹಾಗೂ ಆನಂದವನ್ನು ಹರಡುತ್ತಿದ್ದುದನ್ನು ಸ್ಪಷ್ಟವಾಗಿ ಕಂಡೆ.

ನಾನು ಒಂದು ಬೃಹತ್ತಾದ ಚಿನ್ನದ ಬೆಳಕಿನೆಡೆಗೆ ಅಶರೀರಿಯಾಗಿ ಹೋಗುತ್ತಿದ್ದ ಅನುಭವ ಮಿಂಚಿನಂತೆ ಬಂದುಹೋಯಿತು. ನನಗೆ ಬಹಳ ಆನಂದವಾಯಿತು. ಇಡೀ ದಿನ ನನ್ನ ಮನದಲ್ಲಿ ಒಂದು ಹೆಸರು ಅಸ್ಪಷ್ಟವಾಗಿ ಮೂಡುತ್ತಿತ್ತು. ಅದು ಅದ್ವೈತವೋ, ಅವ್ಯಕ್ತವೋ ತಿಳಿಯಲಿಲ್ಲ. ಅದಾದ ಎರಡು ವಾರಗಳ ನಂತರ ತರಗತಿಯಲ್ಲಿ ಗುರೂಜಿಯವರು ಅಜ್ಞಾತ ದೈವವನ್ನು 'ಅವ್ಯಕ್ತ ಬ್ರಹ್ಮ'ನೆಂದು ಕರೆಯಲಾಗುತ್ತದೆಂದು ತಿಳಿಸಿದರು. ಆಗ ನನಗೆ ಈ ಹಿಂದೆ ನನ್ನ ಮನಸ್ಸಿನಲ್ಲಿ ಗುನುಗುನಿಸುತ್ತಿದ್ದ ಹೆಸರು ಆ 'ಅವ್ಯಕ್ತ ಬ್ರಹ್ಮ' ಎಂಬ ಅರಿವಾಯಿತು. – ರಾಖಿ

ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಧ್ಯಾನಕ್ಕೆ ಮೊದಲು ಶ್ರೀ ಕೃಷ್ಣನಿಗೆ ಚೈತನ್ಯಗಳನ್ನು ಅರ್ಪಿಸಿದಾಗ ನನ್ನ ತ್ರಾಟಕದಲ್ಲಿ ನೀಲಿ ಬೆಳಕನ್ನು ನೋಡಿದೆ. ಅದು ಸುರುಳಿಯಂತೆ ಸುತ್ತಿ ನನ್ನ ಹೃದಯವನ್ನು ಪ್ರವೇಶಿಸಿತು. ನನ್ನ ಹೃದಯದಲ್ಲಿ, ಚಿನ್ನದ ಕಮಲದ ಮೇಲೆ ಕೊಳಲನ್ನು ಹಿಡಿದು ಕುಳಿತಿದ್ದ ಶ್ರೀ ಕೃಷ್ಣನ ದರ್ಶನವಾಯಿತು. ನನ್ನ ಧ್ಯಾನದಲ್ಲಿ ಶ್ರೀ ಕೃಷ್ಣ ಮಗುವಾಗಿ, ಬಾಲಕನಾಗಿ ಹಾಗೂ ಯುವಕನಾಗಿ ಕಂಡು ಬಂದನು. ಶ್ರೀ ಕೃಷ್ಣ ನನ್ನೊಳಗೇ ಇದ್ದು ತನ್ನ ಲೀಲೆಯನ್ನು ತೋರಿಸುತ್ತಿದ್ದ ರೀತಿಯಿಂದ ನಾನು ಅತ್ಯಂತ ಆನಂದಭರಿತಳಾಗಿದ್ದೆ. –ನಾಗಮಣಿ

ಆಗಸ್ಟ್ 30ರಂದು ನನಗೆ ತಪೋನಗರದ ತರಗತಿಗೆ ಬರಲಾಗಲಿಲ್ಲ. ಆದರೆ ಅಂದು 11–30ರಲ್ಲಿ ತಪೋನಗರದೊಡನೆ ಸಂಪರ್ಕ ಕಲ್ಪಿಸಿಕೊಂಡಾಗ ಗುರೂಜಿಯವರ ಪಕ್ಕದಲ್ಲಿದ್ದ ಅಮರರವರನ್ನು ನೋಡಿದೆ. ಅವರಿಗೆ ಗೌರವದಿಂದ ಚೈತನ್ಯವನ್ನು ಅರ್ಪಿಸಿದೆ. ನಂತರ ನಾನು ಒಂದು ಪರವಶಾವಸ್ಥೆಗೆ ಜಾರಿದೆ. ಹಾಗೆಯೇ ಅಮರರವರಿಂದ ಕೆಲವು ಮಾಹಿತಿಗಳನ್ನು ಪಡೆದೆ. ನನ್ನ ಬಲ ಮಣಿಕಟ್ಟಿಗೆ ಒಂದು ಬಿಳಿಯ ತಂತಿಯಿಂದ ಮಾಡಿದ ಉಪಕರಣವನ್ನು ಜೋಡಿಸಲಾಯಿತು. ಅದು ಅತ್ಯಂತ ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಅದೇ ಸ್ಥಿತಿಯಲ್ಲಿ ಬಹಳ ಹೊತ್ತು ಕಳೆದ ನಂತರ ನನ್ನ ಮನಸ್ಸು ಯಾವ ಯೋಚನೆಯೂ ಇಲ್ಲದೆ ಬರಿದಾಗಿತ್ತು. –ನಾಗಶ್ರೀ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ